International Journal of Applied Research 2015; 1(7): 450-452




**ISSN Print:** 2394-7500
**ISSN Online:** 2394-5869
**Impact Factor:** 5.2
IJAR 2015; 1(7): 450-452
www.allresearchjournal.com
Received: 12-04-2015
Accepted: 15-05-2015

**Dr. Neelambika Policepatil (Sherikar)**
Principal and Research Guide, Godutai Doddappa Appa Degree College for Women, S.B.Temple Road, Brahampur, Kalaburagi, Karnataka-585103.

**Correspondence:**
**Dr. Neelambika Policepatil(Sherikar)**
Principal and Research Guide, Godutai Doddappa Appa Degree College for Women, S.B.Temple Road, Brahampur, Kalaburagi, Karnataka-585103.

# Chalukya Maharani Laxmidevi
# ಚಾಲುಕ್ಯ ಮಹಾರಾಣಿ ಲಕ್ಷ್ಮೀದೇವಿ

**Dr. (Mrs.) Neelambika Policepatil (Sherikar)**

ಕರ್ನಾಟಕ ಸಾಂಸ್ಕೃತಿಕಚರಿತ್ರೆಯಲ್ಲಿಕಲ್ಯಾಣಚಾಲುಕ್ಯರ ಕಾಲ ಅತ್ಯಂತ ಪ್ರಮುಖಘಟ್ಟವಾಗಿದೆ.ಎಲ್ಲಾ ಕ್ಷೇತ್ರಗಳಲ್ಲಿಯೂ ವೈಶಿಷ್ಟ್ಯಪೂರ್ಣವಾದ ಪ್ರಗತಿಯನ್ನು ಸಾಧಿಸಿ ನಾಡಕೀರ್ತಿ ಹೆಚ್ಚಿಸಿದ ಅರಸು ಮನೆತನವದು ಹಾಳಾಗಿದ್ದ ತಮ್ಮ ವಂಶವನ್ನು ಪುನಃ ಸ್ಥಾಪಿಸಿ ಅದಕ್ಕೊಂದು ಭದ್ರ ಬುನಾದಿಯನ್ನು ಹಾಕಿದ ಈ ಅರಸ ಮನೆತನದಅರಸರು ಧರ್ಮಾವಲಂಬಿಗಳಾಗಿರಾಜ್ಯ ಪರಿಪಾಲಿಸಿದವರು. ವಿಜ್ಞಾನೇಶ್ವರ ಕವಿ ತನ್ನ 'ಮಿತಾಕ್ಷರ' ದಲ್ಲಿಕಲ್ಯಾಣಪುರದ ಮತ್ತು ಆ ಮನೆತನದಅರಸಆರನೆಯವಿಕ್ರಮಾದಿತ್ಯನನ್ನು ಹೀಗೆ ವರ್ಣಿಸುತ್ತಾನೆ.

"ನಾಸ್ತಿದಸ್ತ್ಯಿ ಭವಿಶ್ಯತಿಕ್ಷಿತಿತಲೇಕಲ್ಯಾಣಕಲ್ಪಪುರಂ
ನೋದೃಷ್ಟ ಶ್ರುತಏವಾಕ್ಷಿತಿಪತಿಃ ಶ್ರೀ ವಿಕ್ರಮಾರ್ಕೋಪಮಃ"

"ಭೂಮಿಯ ಮೇಲೆ ಕಲ್ಯಾಣದಂತಹ ಪಟ್ಟಣ ಹಿಂದೆಇರಲಿಲ್ಲ, ಇಂದುಇಲ್ಲ; ಮುಂದೆ ಹುಟ್ಟುವುದಿಲ್ಲ.ವಿಕ್ರಮಾದಿತ್ಯನಂತಹಅರಸ ಮತ್ತೋಬ್ಬನಿಲ್ಲ"

ಕಲ್ಯಾಣಚಾಲುಕ್ಯಅರಸರಲ್ಲಿಯೇ ವಿಕ್ರಮಾದಿತ್ಯಅತ್ಯಂತ ವೀರ ಮತ್ತುಜನೋಪಕಾರಿಯಾಗಿರುವಂತವನು. ಈ ಅರಸನು ಹೆಚ್ಚಾಗಿ ಯುದ್ದಗಳನ್ನು ಮಾಡಿದ್ದನಾದರೂ ಕಲೆ, ಸಾಹಿತ್ಯ, ವ್ಯಾಪಾರ, ಒಕ್ಕಲುತನ ಮುಂತಾದ ಕ್ಷೇತ್ರಗಳಲ್ಲಿಯೂ ಅಷ್ಟೇ ಉತ್ತಮರೀತಿಯಲ್ಲಿ ಬೆಳಸಿದ್ದ ಕಲ್ಯಾಣವನ್ನುರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು 50 ವರ್ಷಗಳಷ್ಟು ಕಾಲ ದೀರ್ಘವಾಗಿ ಆಳಿ ಉನ್ನತವಾದ ಆಡಳಿತ ನಡೆಸಿರುವದರಿಂದ ಇಂದಿನ ಸಂಶೋಧಕರುಈತನನ್ನುಜಾಗತಿಕ ಚಕ್ರವರ್ತಿಗಳ ಸಾಲಿನಲ್ಲಿ ನಿಲ್ಲಿಸಿದ್ದಾರೆ.

ಬಹುಪತ್ನಿ ವಲ್ಲಭನಾಗಿದ್ದಅರಸ ವಿಕ್ರಮಾದಿತ್ಯನಿಗೆ ಸುಮಾರು 16 ಜನರಾಣಿಯರಿದ್ದರೆಂದು ಶಾಸನಗಳಿಂದ ತಿಳಿದು ಬರುತ್ತದೆ.ತನಗೆ ಮಾಂಡಲಿಕರು, ಸಾಮಂತರುಆಗಿದ್ದವರೊಂದಿಗೆರಕ್ತ ಸಂಬಂಧವನ್ನು ಬೆಳೆಸಿ ಅರಸನು ಆಗಬಹುದಾದ ಅನಾಹುತಗಳನ್ನು ತಪ್ಪಿಸಿದ ಈತನರಾಣೆಯರಲ್ಲಿಒಬ್ಬರಿಬ್ಬರನ್ನು ಹೊರತು ಪಡಿಸಿದರೆ ಎಲ್ಲರೂ ಹೆಚ್ಚಾಗಿ ಮಾಂಡಲಿಕರ ಮಕ್ಕಳೇ ಆಗಿದ್ದರು.ರಾಜಕೀಯ ಸಹಯೋಗಕ್ಕಾಗಿಅರಸನದೂರದೃಷ್ಟಿಇದಾಗಿತ್ತುತಮಗೆ ಬದ್ದ ವೈರಿಗಳಾದ ಚೋಳರನ್ನು ಅನೇಕ ಸಲ ಸೋಲಿಸಿದ್ದರೂ ರಣರಂಗದಲ್ಲಿಕಂಡ ಸನ್ನಿವೇಶದಿಂದ ನೊಂದದೊರೆ ವಿಕ್ರಮಾದಿತ್ಯ ಚೋಳವೀರ ರಾಜೇಂದ್ರನ ಮಗಳನ್ನೆ ಮದುವೆಯಾಗಿ ಸಮಾಜದಲ್ಲಿ ಶಾಂತಿಯನ್ನುಂಟು ಮಾಡಿದ.

ವಿಕ್ರಮಾದಿತ್ಯದರಾಣಿಯರಲ್ಲಿ ಕೆಲವರುಪಟ್ಟದರಾಣಿಯರೆಂದೂ ಪ್ರಸಿದ್ಧಗೊಂಡರೆ, ಕೆಲವರು ಪಿಯರಸಿಯರೆಂದು ಮತ್ತೆ ಕೆಲವರನ್ನುರಾಣಿಯರೆಂದು ಮಾತ್ರಕರೆಯಲಾಗಿದೆ.ಇವರಲ್ಲಿ ಹೆಚ್ಚಿನರಾಣಿಯರುಅರಸನ ವಿಸ್ತಾರವಾದ ಸಾಮ್ರಾಜ್ಯದ ಆಡಳಿತದಲ್ಲಿ ಭಾಗವಹಿಸಿದ್ದು ಗಮನಿಸವಂತಹದ್ದಾಗಿದೆ.ಇಂತಹ ವೀರರಾಣಿಯರಲ್ಲಿರಾಣಿಲಕುಮಾದೇವಿಯ ವ್ಯಕ್ತಿತ್ವವಂತೂ ವಿಶಿಷ್ಟವಾಗಿದೆ.ವ್ಯಕ್ತಿತ್ವವಂತೂ ವಿಶಿಷ್ಟವಾಗಿದೆ.

ಕನ್ನಡದ ಅನೇಕ ಶಾಸನಗಳು, ಕಾವ್ಯಗಳು ಅವಳ ವ್ಯಕ್ತಿತ್ವವನ್ನು ಮನೋಜ್ಞರೀತಿಯಲ್ಲಿ ವರ್ಣಿಸಿವೆ.ಅಲ್ಲೆಲ್ಲಾಇವರನ್ನು ಲಕ್ಷ್ಮಾದೇವಿ, ಲಕ್ಷ್ಮೀದೇವಿ, ಲಕ್ಷ್ಮೀ ಮಹಾದೇವಿ, ಪಿಯರಸಿ ಲಕ್ಷ್ಮಾದೇವಿ, ಲಕುಮಾದೇವಿಯೆಂದು ಹೆಸರಿಸಲಾಗಿದೆ.ಹರಿಹರತನ್ನತೆಲಗು ಜೊಮ್ಮಯನರಗಳೆಯಲ್ಲಿ –

'ಪರ್ಮಾಡಿಲಾಯನೊಲಮೆಯಕಾಂತೆ
ಪರಮಶಿವಲಿಂಗಾರ್ಚನಾನಿರತ ಗುಣಶಾಂತೆ
ತನಗೆ ಲಕುಮಾದೇವಿಯೆಂಬ ಪೆಸರೊಪಿರಲ್
ಮನಸಿಜಾರಿಯಕ್ಕರಿಂದರ್ಚಿಸುತ್ತಿರಲ್'

ಎಂದುರಾಣಿಯ ಹೆಸರನ್ನುಉಲ್ಲೇಖಿಸುವದರೊಂದಿಗೆ ಅವಳ ವ್ಯಕ್ತಿತ್ವವನ್ನು ವರ್ಣಿಸುತ್ತಾನೆ.ಆಧ್ಯಾತ್ಮಿಕ ಒಲವುಳ್ಳ ರಾಣಿಯುಅರಸನಿಗೆ ಆಡಳಿತದಲ್ಲಿ ಒಳ್ಳೆಯ ಸಲಹೆ ಸೂಚನೆಗಳನ್ನು ನೀಡುವದರೊಂದಿಗೆ ಶಿವದೇವಾಲಯಗಳನ್ನು ಕಟ್ಟಿಸುವದು, ಅವುಗಳಿಗೆ ದಾನನೀಡಿಅಲ್ಲಿಯಾವಾಗಲೂಅನ್ನ ಮತ್ತುಜ್ಞಾನದಾಸೋಹ ನಡೆಯುವಂತೆ ನೋಡಿಕೊಳ್ಳುವುದು, ಅಲ್ಲಲ್ಲಿ ಅರವಟ್ಟಿಗೆಗಳನ್ನು ಇಡಿಸುವುದು– ಹೀಗೆ ಜನಹಿತ ಕಾರ್ಯಗಳನ್ನು ಮಾಡುತ್ತಾಜನ ಸಾಮಾನ್ಯರ ಗೌರವಾದರಗಳಿಗೆ ಪಾತ್ರಗಳಾಗಿದ್ದಳು ಮಡದಿಯ ಕಾರ್ಯಗಳನ್ನು ಮೆಚ್ಚಿಕೊಂಡಿದ್ದಅರಸನು ಅವಳನ್ನು ಬಹಳ ಪ್ರೀತಿ ಗೌರವಗಳಿಂದ ಕಾಣುತ್ತಿದ್ದನು.

ಲಕುಮಾದೇವಿ ಪಟ್ಟದರಾಣಿಆಗಿರಲಿಕ್ಕಿಲ್ಲ ಇವಳು ಪಿರಿಯರಸಿಯೇ ಆಗಿರಬಹುದು, ಆದರೆ ಪಟ್ಟದರಾಣಿಗಿಂತಲೂ ಹೆಚ್ಚು ಗೌರವವನ್ನು ಪಡೆದವಳಾಗಿದ್ದಳು.ಡಾ॥ ಜಿ.ಎಂ.ನಾಗಯ್ಯ ಹೇಳಿರುವಂತೆ 'ಬಹುಶಃ ಲಕ್ಷ್ಮಾದೇವಿಗೆ ಸಂತಾನವಿಲ್ಲದಿದ್ದಕ್ಕಾಗಿಆಕೆಯು ಪಟ್ಟದರಾಣಿಯ ಪಟ್ಟವನ್ನು ಕಳೆದುಕೊಂಡಿರಬಹುದು.

ಲಕುಮಾದೇವಿಯಚಾರಿತ್ರಿಕಚರಿತ್ರೆಯ ಮೇಲೆ ಬೆಳಕು ಚೆಲ್ಲುವಖೇಡಗಿ ಶಾಸನ ಅವಳ ತಂದೆ–ತಾಯಿಯರ ಹೆಸರುಗಳನ್ನು ಸೂಚಿಸುವದು.ತಂದೆಖೇಡಿಗೆಯಕಂಕೋಜತಾಯಿ ಮಸಣಿಕವ್ವೆಇಲ್ಲಿಕಂಕೋಜ ಹೆಸರಿನಾಂತ್ಯದ'ಓಜ' ಶಬ್ದ ಅಂದುಅದು ಶಿಲ್ಪಕರ್ಮ ಅಥವಾ ಲೋಕಕರ್ಮವರೆಂಬುದು ಸೂಚಿಸುತ್ತದೆಂಬು ಸಂಶೋಧಕರಅಭಿಪ್ರಾಯ

ಹೀಗಾಗಿಲಕ್ಷ್ಮೀದೇವಿಶಿಲ್ಪಿಕರ್ಮಕುಲದಲ್ಲಿಹುಟ್ಟಿದವಳೆಂಬುದು ಇದರಿಂದ ಸಾಬೀತಾಗುತ್ತದೆ.

ಅರಸನ ಕೈ ಹಿಡಿದ ಮೇಲೆಯೂಕೂಡಾರಾಣಿಯುತನ್ನದಾಂಪತ್ಯಜೀವನ್ನು ಕೇವಲ ಐಹಿಕ ಭೋಗ ರಸಿಕತೆಗಳಿಗೆಸಂತಾನಪ್ರಾಪ್ತಿಗೆ ಸೀಮಿತವೆಂದು ಮಾತ್ರ ಭಾವಿಸಲಿಲ್ಲ.ಅದರಾಚೆಗೂಒಂದುಜೀವನವಿದೆಯೆಂಬುದನ್ನು ಮನಗಂಡಿದ್ದಳು ಅಂತೆಯೇತನಗಿಲ್ಲದಯಾವುದನ್ನುಕುರಿತರಾಣಿಯುಚಿಂತಿಸಲಿಲ್ಲ.ಒಂದುಕಡೆ ರಾಜ್ಯಾಡಳಿತ ನಡೆಸಲು, ಇನ್ನೊಂದಡೆ ಶಿವಸ್ಮರಣೆಗೈಯಲು ತನ್ನ ಮನಸ್ಸನ್ನು ಹದ ಮಾಡಿದಳು ಶಿವಭಕ್ತಿಯನ್ನೆ ತನ್ನಜೀವನದ ಸಾರ ಮಂತ್ರವನ್ನಾಗಿ ಸ್ವೀಕರಿಸಿದ್ದಳು.ತನ್ನರಾಜ್ಯದಲ್ಲಿರುವ ಶರಣರನ್ನು ಗುರುತಿಸಿ ಅವರೊಂದಿಗೆ ಭಕ್ತಿ ಗೌರವಗಳೊಂದಿಗೆ ನಡೆದುಕೊಳ್ಳುತ್ತಿದ್ದಳು.ಶಿವಸಾಕ್ಷಾತ್ಕಾರಕ್ಕಾಗಿ ಶಿವಸಾಧನೆಯಲ್ಲಿ ತೊಡಗಿಸಿಕೊಂಡಿದ್ದಳು.

ಅವಳನ್ನು ಕುರಿತ ಶಾಸನಗಳಲ್ಲಿ, ಕಾವ್ಯಗಳಲ್ಲಿ ಅವಳ ವಿಚಾರದಜಾನ್ನತ್ಯವನ್ನುಕಾಣಬಹುದಾಗಿದೆ.ಆಕೆಯ ಲೌಕಿಕ ಮಾಹಿತಿಯನ್ನು ಅವು ಒದಗಿಸಿಕೊಡುತ್ತಿವೆ.

ಅರಸ ವಿಕ್ರಮಾದಿತ್ಯನ ಆಡಳಿತಾವಧಿಯ ಐದನೆಯ ವರ್ಷದಿಂದಲೇಅಂದರೆಕ್ರಿ.ಶ. 1080 ರಲ್ಲಿ ಲಕುಮಾದೇವಿ ಆಡಳಿತದ ಭಾರವನ್ನುವಹಿಸಿಕೊಂಡಿದ್ದಳು.ಕ್ರಿ.ಶ 1080ರಲ್ಲಿ ಡೋಣಿಯನ್ನುಕ್ರಿ.ಶ. 1084ರಲ್ಲಿ ಕಲ್ಯಾಣವನ್ನುಕ್ರಿ.ಶ. 1095–96ರಲ್ಲಿ ಹದಿನೆಂಟುಅಗ್ರಹಾರ ಮತ್ತು ಡಂಬಳವನ್ನು 1110–11ರಲ್ಲಿ ನಿಡಸಿಂಗಿಯನ್ನು ಆಳಿದ್ದಳೆಂಬುದಕ್ಕೆ ಶಾಸನಗಳ ಆಧಾರಗಳುಂಟು ಮೂವತ್ತು ವರ್ಷಗಳಷ್ಟು ದೀರ್ಘಕಾಲ ಆಡಳಿತ ನಡೆಸಿದ ಇವಳನ್ನು ಸೂಡಿ ಶಾಸನವು ಹೀಗೆ ವರ್ಣಿಸುತ್ತದೆ.

“ಅನವದ್ಯಾಂಗಜರಾಜ್ಯಲಕ್ಷ್ಮೀಲಲನಾರತ್ನಂ ವಿಳಾಸೋತ್ಪಳಂ
ಜನಿತ ಶೇಷಜಗಜ್ಜನಾಭಿಮತೆಯೋ ವಿಪ್ರಾಪ್ತಕಳ್ವದ್ದುಮಂ
ಜನಿತಶೇಷಜಗಜ್ಜನಾಭಿಮತೆಯೋ ವಿಪ್ರಾಪ್ತಕಳ್ವದ್ದುಮಂ
ದ್ಯುನದಿ ನಿರ್ಮ್ಮಳಕೀರ್ತಿ ವಿಶ್ವಜಗತೀಭದ್ವಿಕ್ರಮಾದಿತ್ಯ ಚ
ಕ್ರಿ ನಿಸರ್ಗೋದಿತ ಪುಣ್ಯದೇವತೆಯೆ ಲಕ್ಷ್ಮಾದೇವಿ ಭೂಚಕ್ರದೊಳ್”

ಹೀಗೆ ರಾಜಕೀಯ ಸೂತ್ರಗಳನ್ನು ಹಿಡಿದು ಸುವ್ಯವಸ್ಥಿತ ಆಡಳಿತವನ್ನು ಕೊಟ್ಟ ಮೊದಲ ವೀರಶೈವ ಮಹಾರಾಣಿ ಲಕುಮಾದೇವಿ ‘ ಶಿವಲಿಂಗ ಸಂಪನ್ನೇ’ ‘ಜಂಗಮ ಸ್ನೇಹಿ’ ಸತ್ಯಭಕ್ತಿ ಶಿವಲಿಂಗಾರ್ಚನಾನಿರತೆ– ಎಂಬ ವಿಶೇಷಣೋಕ್ತಿಗಳಿಂದ ಕಾವ್ಯಗಳು ಅವಳನ್ನು ವರ್ಣಿಸುತ್ತವೆ.ಸಾಮಾನ್ಯ ಮನೆತನದಲ್ಲಿ ಹುಟ್ಟಿತದನಂತರಅರಸನಕೈಹಿಡಿದು ನಂತರ, ಆತನಆಸ್ಥಾನದಲ್ಲಿದ್ದ ಶರಣ ಮಹಾಮಂತ್ರಿ ಕೊಂಡಗುಳಿ ಕೇಶಿರಾಜ, ಶರಣತೆಲುಗುಜೊಮ್ಮಯ್ಯ, ಬಾಹೂರು ಬೊಮ್ಮಯ್ಯಇವರ ವ್ಯಕ್ತಿತ್ವದ ಪ್ರಭಾವದಿಂದಾಗಿ ಲಕುಮಾದೇವಿ ವೀರಶೈವಧರ್ಮ ಸ್ವೀಕರಿಸಿದ್ದಂತೆ ತೋರುತ್ತದೆ.

ಅರಸ ವಿಕ್ರಮಾದಿತ್ಯನಿಗಿಂತ ಹೆಚ್ಚಾಗಿ ಆತನ ಮಡದಿ ಲಕುಮಾದೇವಿ ಶರಣರ ಮಹತ್ವವನ್ನು, ವ್ಯಕ್ತಿತ್ವವನ್ನು ಅರಿತಿದ್ದಳು ಜೊಮ್ಮಯ್ಯ. ಮುಂತಾದ ಶರಣರ ವಿರುದ್ದವಾಗಿ ನಡೆದುಎಲ್ಲಿಅರಸಅಚಾತುರ್ಯಕ್ಕೆ ಒಳಗಾಗುತ್ತಾನೋ ಎಂಬ ಅಂಜಿಕೆಯುಕೂಡಾ ಅವಳೊಳಗಿತ್ತು.ಒಂದೆಡೆಗಂಡನ ಪ್ರೇಮಇನ್ನೊಂದೆಡೆ ಶರಣಧರ್ಮಎರಡನ್ನು ಉಳಿಸಿಕೊಂಡ ಬಂದ ವೀರರಾಣಿ ಲಕುಮಾದೇವಿ ಗಂಡಚಕ್ರವರ್ತಿಯಾದರೇನು? ಶರಣರೊಂದಿಗೆಅಹಂಕಾರದಿಂದ ನಡೆಯುವದುಆತನಯೋಗ್ಯತೆಗೆತಕ್ಕದ್ದಲ್ಲ ಎಂಬ ತಾತ್ವಿಕ ನಿಲುವನ್ನು ತಾಳಿ ತನ್ನಜಾಣತನದಿಂದ ನಡೆದು ಆಗುವ ಅನಾಹುತ ನಡೆಯದಂತೆ ಮಾಡಿದಳು.ಮತ್ತೆಅರಸ ಮತ್ತು ಶರಣರ ನಡುವೆ ಮಧುರ ಬಾಂಧವ್ಯ ಬೆಳೆಸಿದಳು.

ಜಂಗಮಸ್ನೇಹಿಯಾದರಾಣಿತೆಲುಗು ಬೊಮ್ಮಯ್ಯನ ಏಕನಿಷ್ಠೆ ಆತನ ಶಿವಭಕ್ತಿ ಕೇಇ ಸಂತೋಷಪಟ್ಟುತಾನೂ ಭಕ್ತಿಯಿಂದ

‘ಹೊಸಹೊಸ ಪರಿಯ ವಸ್ತ್ರ ಸಂತತಿಗಳಂ
ಚಂದನಂಕರ್ಪೂರವಗಿಲು ಧೂಪಂಗಳಂ
ಮಂದ್ಯೆಸಿ ಕಂಪಿಡುವ ಸಾದು ಕಸ್ತೂರಿಗಳಂ
ಅಂದಂದು ಬಂದೆಸೆವ ಪೊಚ್ಚ ಪೊಸ ಪೊಗಳಂ

ಜೊಮ್ಮಯ್ಯನ ಮನೆಗೆ ಕಳುಹಿಸುತ್ತಿದ್ದಳು ಆತನೊಳಗಿರುವ ಶಿವಭಕ್ತಿ ಮಾತ್ರಆಕೆಯಅಂತರಂಗಕ್ಕೆ ಹೊಳದದ್ದು ಅಂತೆಯೇ ದಿನಾಲೂ ಅವಳು ಆತನ ಶಿವಲಿಂಗ ಪೂಜೆಗೆ ಬೇಕಾದುದ್ದನ್ನು ಕಳುಹಿಸುತ್ತಿದ್ದಳು.ಆಕೆಯೊಳಗಿರುವ ಭಕ್ತಿಯನ್ನು ಗಮನಿಸಿದ್ದ ಜೊಮ್ಮಯ್ಯ ಕಳುಹಿಸದ ವಸ್ತುಗಳನ್ನು ಸ್ವೀಕರಿಸಿ ಪೂಜೆ ಮಾಡುತ್ತಿದ್ದರಾಣಿಯು ಕೇವಲ ಆಡಂಬರಕ್ಕಾಗಿಯೋ, ಅಹಂಕಾರದಿಂದಲೊ ಕಳುಹಿಸಿದ್ದರೆ ಬೊಮ್ಮಯ್ಯ ಆ ವಸ್ತುಗಳನ್ನು ಸ್ವೀಕರಿಸುವದು ಸಾಧ್ಯವಿರಲಿಲ್ಲ. ಒಂದು ದಿನ ಜೊಮ್ಮಯ್ಯಅರಮನೆಗೆ ಬಂದಾಗ ಹೊರಗೆಓರ್ವ ಪುರಾಣಿಕ ‘ವೈಷ್ಣವ ಪುರಾಣ’ ಓದುತ್ತಾ ಶಿವನಿಂದೆಯನ್ನು ಮಾಡುತ್ತಿದ್ದನು.ಹೊರಗೆನಿಂತಜೊಮ್ಮಯ್ಯನಕಿವಿಯ ಮೇಲೆ ಈ ಶಬ್ದಗಳು ಬಿದ್ದಿದೆತಡ

‘ಎಲೆಲೆಲೆ ಶಿವದ್ರೋಹಿ ಇಂತು ಪುಸಿ ನುಡಿವರೇ
ಎಲ ಪಾಪಿ ಪಾಪಿ ಪಾತಕಇಂತು ಬೊಗಳ್ದುರೆ”

ಎನ್ನುತ್ತಾಉಗ್ರಕೋಪಿಷ್ಟನಾಗಿ ಆ ಪುರಾಣಿಕನನನ್ನುಇರಿದುಕೊಂದು ಹಾಕಿದನು. ಈ ವಿಷಯ ಒಳಗಿದ್ದ ಅರಸನಿಗೆ ತಿಳಿಯಲಿಲ್ಲ ತನ್ನ ಸೇವಕರನ್ನುಕರೆದು “ಪಾರ್ವನೇಕೆ ಪುರಾಣಮಂ ಪೇಳದಸುರದಿರ್ದ’ –ಎಂದು ಕೇಳಲು ನಡೆದಘಟನೆಯಿಂದಅಂಜಿದಯಾರೂಅರಸನಿಗೆ ನಿಜಸ್ಥಿತಿಯನ್ನು ತಿಳಿಸಲಿಲ್ಲ.ಆ ಸಂದರ್ಭದಲ್ಲಿ ವಿಷ್ಣು ಪ್ರತಿಮೆತನ್ನಿಂದಾದ ಶಿವನಿಂದೆಯಿಂದ ಕಣ್ಣೀರು ಸುರಿಸುತ್ತಿದ್ದದನ್ನುಕಂಡುಅಪಶಕುನವೆಂದು ತಿಳಿದು ಅರಸ ಹೊರಗೆ ಬಂದಾಗಎಲ್ಲವನ್ನು ತಿಳಿದುಕೊಂಡನು.

ಜೊಮ್ಮಯ್ಯನನ್ನುಕರೆಯಲು ಕಳುಹಿಸಿದನು.ಸಿಂಹಾಸನಾರೂಢನಾಗಿದ್ದ ಅರಸನ ಸಿಟ್ಟನ್ನು ಕಂಡು ಲಕುಮಾದೇವಿ ಈ ಸಂದರ್ಭದಲ್ಲಿತೋರಿದದೂರದೃಷ್ಟಿ ಮುಖ್ಯವಾಗಿದೆ.ಜೊಮ್ಮಯ್ಯನ ವ್ಯಕ್ತಿತ್ವದಅರಿವಿದ್ದ ಲಕುಮಾದೇವಿ ‘ ತನ್ನ ಪ್ರಾಣಲಿಂಗಮಂ ಸಿಂಗರಿಸಿ ಮಾಣಿಕ್ಯ ಸಿಂಹಾಸನ ವ್ಯರಸರ ಸನರಿಯದಂತೆ ಹಿಡಿದುಕೊಂಡುತನ್ನವರೊಂದಿಗೆ ನಿಲ್ಲುತ್ತಾಳೆ.

ಅಂಜದೆ ಅಳುಕದೆ ನಿರ್ಭಯನಾಗಿಅರಸನಲ್ಲಿಗೆ ಬಂದಜೊಮ್ಮಯ್ಯನಿಗೆಎದುರಿಗಿಯೇ ಶಿವಲಿಂಗ ಬೆಳಕು ಗೋಚರಿಸಿತ್ತು.“ನಿಜಭಕ್ತಿಯ ಭರದಿಂ ಪೊಡ ಮಡಲ್ಕೆಯೆತ್ತುತ್ತೊಲ್ಲದೆ ನಿಂದು ಭವಿಯ ಪಿಂದಿರಲೇಕೆ ಪೊಡಮಡಿಸಿಕೊಳಲೊಲಿವರೆ ಕೆಲಕ್ಕೆ ಬಿಜಯಂಗೈವುದು” ಎಂದುಎತ್ತಿಂದಕೈಯಿಂದ ಮತ್ತೊಂದು ದಿಕ್ಕಿಗೆ ಸನ್ನೆ ಮಾಡುವನು ಆಗ ಆ ಶಿವಲಿಂಗ ಸಿಂಹಾಸನ ಬಿಟ್ಟು ಭಕ್ತನ ಸಮೀಪಕ್ಕೆ ಬಂದುಗಗನಾಸನದಲ್ಲಿ ನಿಲ್ಲುವದು.

ಇದನ್ನೆಲ್ಲಾತನ್ನಕಣ್ಣಾರೆಕಂಡಅರಸ ವಿಕ್ರಮಾದಿತ್ಯನಿಗೆಜೊಮ್ಮಯ್ಯನ ಮೇಲಿದ್ದ ಸಿಟ್ಟು ಮಾಯವಾಗಿ ನಂಬುಗೆ ಬೆಳೆದು ಭೀತಿ ಹುಟ್ಟಿತು.ಪುರಾಣಿಕನನ್ನುಕೊಂದುದಕ್ಕೆಕಾರಣ ಕೇಳಲಾಗಿ ‘ಶಿವನಿಂದೆ ಮಾಡಿದ್ದಕ್ಕೆಕೊಂದೆನೆಂದು ಹೇಳಿ “ಆ ಪೆಣನಂ ಮುಸುಂಕಿಟ್ಟು ತೆಗೆಯಲ್ಪಳುವಿನ ರಾಶಿಯಾಗದಿರ್ದೊಡೆ ನಾನಪರಾಧಿಎಂದು ಸಾರಿದ. ಹಾಗೇ ಪರೀಕ್ಷಿಸಿ ನೋಡಲುಅಲ್ಲಿದ್ದ ಹುಳದ ರಾಶಿಯನ್ನು ಕಂಡಅರಸತನ್ನತಪ್ಪನ್ನುಒಪ್ಪಿಕೊಂಡುಜೊಮ್ಮಯ್ಯನಲ್ಲಿಕ್ಷಮೆ ಬೇಡಿದ.ಅಷ್ಟೇ ಅಲ್ಲ ‘ಇರ್ಚ್ಛಾಸಿರ ಪೊಂಗಳಂ ಕಾಣಿಕೆಯಾಗಿತ್ತೆನಲ್ಲದೆಕಲ್ಯಾಣಕ್ಕೆಒಂದುಯೋಜನಾಂತರದಲ್ಲಿ ‘ಪನ್ನಿರ್ಚ್ಛಾಸಿರ ಪೊನ್ನಸಿದ್ದುವ ಪಟ್ಟಣಮಂ ಶಿವಪುರವಂ ಮಾಡಿಕೊಟ್ಟ.

ಲಕುಮಾದೇವಿಯು ಸಂತೋಷಕ್ಕಂತೂಕೊನೆಯಿರಲಿಲ್ಲ. ತನ್ನಗುರುತೆಲುಗುಜೊಮ್ಮಯ್ಯನನ್ನು ಗೌರವಿಸಿ ಸತ್ಕರಿಸಿದ್ದಕ್ಕಾಗಿ ರಾಣಿಗೆತನ್ನ ಪತಿಯ ಮೇಲಿನ ಪ್ರೀತಿಗೌರವಇಮ್ಮಡಿಗೊಂಡವು.ಆ ಪ್ರೀತಿ ಆದರಗಳಿಂದಲೇಅರಸನಲ್ಲಿರುವಕ್ರೋಧವನ್ನು ಅಳಿಸಿ ಅವನನ್ನು ಶರಣಬಂಧಿ, ಶಿವಬಂಧಿಯಾಗಿ ಮಾಡಿದ ಲಕುಮಾದೇವಿಯಜಾಣ್ಮೇ ಮೆಚ್ಚುವಂತಹದು. ಅವನೊಳಿರುವ ಮಾಯದ ಪರೆಯನ್ನು ಕಿತ್ತಿಸಿ ಅಲ್ಲಿ ಶಿವಪಾರಮ್ಯವನ್ನು ಮೊಳಗಿಸಿದ್ದಳು.ಹೆಣ್ಣು ಕೇವಲ ಮಾಯದ ಮೂಟೆಯಲ್ಲತನ್ನಾತ್ಮದ ಪ್ರಭೆಯಿಂದ ಅವಳು ಪುರುಷನಆತ್ಮೋದ್ಧಾರಕ್ಕೆ ಪ್ರೇರಕವಾಗಬಲ್ಲಳು.ಎಂಬುದಕ್ಕೆರಾಣಿ ಲಕುಮಾದೇವಿ ನಿದರ್ಶನಳಾಗಿದ್ದಾಳೆ.

ಹರಿಹರನ ರಗಳೆಯಲ್ಲಿ ಮೂಡಿ ಬಂದರಾಣಿ ಲಕುಮಾದೇವಿಯ ಪಾತ್ರಚಿತ್ರಣಅಪ್ಪಟ ಶಿವಭಕ್ತಿಯ ಪೂರ್ಣದೃಷ್ಟಿಯಿಂದಕೂಡಿದುದಾಗಿದೆ.ರಾಣಿಯ ಬಾಹ್ಯ ಸೌಂದರ್ಯದ ವರ್ಣನೆಯಲ್ಲಿತನ್ನಾಸಕ್ತಿಯನ್ನುತೋರಿಸದೆ, ಅವಳ ಅಂತರಂಗದ ಶಿವ ಸೌಂದರ್ಯದ ವರ್ಣನೆ ಮಾತ್ರ ಮಾಡುತ್ತಾನೆ.ತನ್ನ ಬದುಕಿನ ನಾನಾಮುಖಗಳಲ್ಲಿ ಶಿವಭಕ್ತಿಯನೆ ಕಂಡು ಸರ್ವಭಾವ ಅನುಭಾವಗಳನ್ನು ಶಿವಭಕ್ತಿಯಾಗಿ ಉದಾತ್ತಿಕರಣವಾಗಿಸಿಕೊಂಡ ಲಕುಮಾದೇವಿಯ ಪಾತ್ರವನ್ನುಗೌರವಯುತವಾಗಿಕಂಡುಅರ್ಥಪೂರ್ಣವಾಗಿ ಚಿತ್ರಿಸಿದ್ದಾನೆ.

ಹೀಗೆ ತನ್ನಕಾಲದಲ್ಲಿದ್ದ ಶರಣರನ್ನು ಗೌರವಿಸಿ ಅವರಧರ್ಮ ಮಾರ್ಗವನ್ನು ಅನುಸರಿಸಿದ ರಾಣಿ ಲಕುಮಾದೇವಿಗೆ ಸಂಬಂಧಪಟ್ಟ ವಿಷಯವನ್ನು ಹರಿಹರ ಕವಿ ತೆಲುಗು ಬೊಮ್ಮಯ್ಯನ ಸಂದರ್ಭದಲ್ಲಿ ಮಾತ್ರಉಲ್ಲೇಖಿಸುತ್ತಾನೆ.ಆರನೆಯ ವಿಕ್ರಮಾದಿತ್ಯನಲ್ಲಿದಂಡಾಧಿ ಪತಿಯಾಗಿದ್ದ ಕೊಂಡುಗುಳಿ ಕೇಶೀರಾಜನೆ ರಗಳೆಯಲ್ಲಿ ಲಕುಮಾದೇವಿಯಉಲ್ಲೇಖ ಮಾಡದಿರುವದುಆಶ್ಚರ್ಯಕರವಾಗಿದೆ.ಶರಣರನ್ನುಗೌರವಿಸುವ ಮನೋಭಾವ ಉಳ್ಳ ಲಕುಮಾದೇವಿ ಅಂದುತಮ್ಮರಾಜಧಾನಿ ಕಲ್ಯಾಣದಲ್ಲಿಯೇಇದ್ದರೆನ್ನುವ ಕೊಂಡಗುಳಿ ಕೇಶಿರಾಜ ಆತನ ಮಡದಿ ಗಂಗಾದೇವಿ, ಬಾಹೂರ ಬೊಮ್ಮಯ್ಯ, ರಾಗರಸಾಂಕ ಮುಂತಾದವರನ್ನೊಂದಿಗೆಗೌರವಾನ್ವಿತವಾಗಿಯೇ ನಡೆದುಕೊಂಡಿರುತ್ತಾಳೆ.

ಹೀಗೆ ಶಿವಶರಣರನ್ನು ಭಕ್ತಿ ಗೌರವಗಳಿಂದ ಕಾಣುವ ಮಹಾರಾಣಿ ಲಕ್ಷ್ಮೀ ಮಹಾದೇವಿ ಅನೇಕ ಜನಪರ ಕಾರ್ಯಗಳನ್ನು ಕೈಕೊಂಡು ಪ್ರಜೆಗಳಿಗೆ ಅಚ್ಚು ಮೆಚ್ಚಿದರಾಣಿ ಎನಿಸಿದ್ದಳು.ಪ್ರಜೆಗಳು ಅವಳ ಮೇಲಿಟ್ಟ ಗೌರವಾದರಗಳು ಕಂಡೆಅರಸ ವಿಕ್ರಮಾದಿತ್ಯ ಇವಳ ಮೇಲೆ ಎಲ್ಲಾರಾಣಿಯರಿಗಿಂತಲೂ ಹೆಚ್ಚು ವಿಶ್ವಾಸ ಮತ್ತು ಪ್ರೀತಿಯನ್ನು ಉಳ್ಳವನಾಗಿದ್ದನು. ಅಂತೆಯೇಡೋಣಿ– ಶಾಸನ ಅವಳನ್ನು ಮಹಾದಾನ ವಿನೋದೆ, ದಾನಚಿಂತಾಮಣಿಗಳೆಂದು ವರ್ಣಿಸುವೆ.

**References:**


1. S.I.I. XI (ii) 126 1080 December 14 -Doni
2. ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದುಅಧ್ಯಯನಲೇಖಕರು: ಜಿ.ಎಮ್.ನಾಗಯ್ಯ–ಪುಟ– 2
3. ಹರಿಹರನ ರಗಳೆಗಳು.ಸಂಪಾದನೆ: ಡಾ. ಫ.ಗು ಹಳಕಟ್ಟಿ– ಪುಟ–332
4. S.I.I.XXNo. 94 Khedagi
5. I.I. 15 No. 61 1084 December Soodi
6. ಹರಿಹರನ ರಗಳೆಗಳು.ಸಂಪಾದನೆ : ಫ.ಗು ಹಳಕಟ್ಟಿ–ಪುಟ 333
7. ಹರಿಹರನ ರಗಳೆಗಳು.ಸಂಪಾದನೆ : ಫ.ಗು ಹಳಕಟ್ಟಿ–ಪುಟ 334
8. ಹರಿಹರನ ರಗಳೆಗಳು.ಸಂಪಾದನೆ : ಫ.ಗು ಹಳಕಟ್ಟಿ–ಪುಟ 338